ಸಿ.ಎನ್. ರಾಮಚಂದ್ರನ್

# ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಅಪರೂಪದ ವ್ಯಕ್ತಿ–ವಿದ್ವಾಂಸ

ನನಗೆ ಪ್ರೊ. ಶೇಷಗಿರಿ ರಾವ್ ಅವರ ಹೆಸರು ಪರಿಚಯವಾದದ್ದು ನನ್ನ ವಿದ್ಯಾರ್ಥಿ ದೆಸೆಯಲ್ಲಿ. ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಮೈಸೂರಿನ ಪಬ್ಲಿಕ್ ಲೈಬ್ರರಿಯಲ್ಲಿ ಅವರ ಲೇಖನಗಳನ್ನು 'ಕಥಾಂಜಲಿ' ಎಂಬ ಮಾಸ ಪತ್ರಿಕೆಯಲ್ಲಿ ಓದುತ್ತಿದ್ದೆನೆಂಬ ನೆನಪು. ಐವತ್ತರ ದಶಕದಲ್ಲಿ ನನ್ನ ಎಂ.ಎ. ಶಿಕ್ಷಣ ಮುಗಿಯುವವರೆಗೂ ಆಗಾಗ ಪತ್ರಿಕೆಗಳಲ್ಲಿ ಬರುತ್ತಿದ್ದ ಅವರ ಲೇಖನಗಳನ್ನು ಓದುತ್ತಿದ್ದೆ, ಆದರೆ ಅವರನ್ನು ಭೇಟಿಯಾಗಿರಲಿಲ್ಲ. ಅನಂತರ, ನಾನು ಮೈಸೂರು ಬಿಟ್ಟು ಎಲ್ಲೆಲ್ಲೋ ಅಲೆಯುತ್ತಾ, ಕೊನೆಗೆ ಮಂಗಳೂರಿಗೆ ಬಂದನಂತರವೇ ಅವರನ್ನು ಭೇಟಿ ಮಾಡುವ ಹಾಗೂ ಅವರ ಕೃತಿಗಳನ್ನು ಗಂಭೀರವಾಗಿ ಅಧ್ಯಯನ ಮಾಡುವ ಅವಕಾಶ ದೊರಕಿದ್ದು. 1983ರಲ್ಲಿ, ನಾನು ಯುಎಸ್‌ನಿಂದ ಬಂದು ಬೆಂಗಳೂರಿನಲ್ಲಿ ಕೆಲಸ ಹುಡುಕುತ್ತಿದ್ದಾಗ, ಆಗ ತಾನೇ ಪ್ರಾರಂಭವಾಗಿದ್ದ ಮಂಗಳೂರು ವಿವಿಯಲ್ಲಿ ನನಗೆ ಅವಕಾಶ ದೊರಕಬಹುದೆಂದು, ಕೂಡಲೇ ಅಲ್ಲಿಯ ವಿಸಿ ಅವರನ್ನು ಕಾಣಲು ಸೂಚಿಸಿದ್ದು ಎಲ್.ಎಸ್.ಎಸ್. ನಾನು ಮಂಗಳೂರು ವಿವಿ ಸೇರಿದ ನಂತರ ಎಲ್.ಎಸ್.ಎಸ್. ಮತ್ತು ನನ್ನ ಸಂಬಂಧ ಗಾಢವಾಯಿತು: ಕಾಲಕಾಲಕ್ಕೆ ಅವರು ಕೈಗೊಂಡ ಅನೇಕ ಯೋಜನೆಗಳಲ್ಲಿ (ಕೆ.ಎಂ. ಜಾರ್ಜ್ ಸಂಪಾದಿಸಿದ್ದ 'ಇಂಡಿಯನ್ ಲಿಟರೇಚರ್' ಸಂಪುಟಗಳ ಕನ್ನಡ ಅನುವಾದ, ಉದಯಭಾನು ಕಲಾಸಂಘದ ರಜತ ಮಹೋತ್ಸವದ ಪ್ರಕಟಣೆಯಾದ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಸಂಪುಟ, ಇತ್ಯಾದಿ) ಅವರು ನನ್ನನ್ನೂ ಸೇರಿಸಿಕೊಂಡರು. ನನ್ನ 'ತೌಲನಿಕ ಸಾಹಿತ್ಯ' ಕೃತಿಗೆ ಪಾಂಡಿತ್ಯಪೂರ್ಣ ಮುನ್ನುಡಿಯನ್ನು ಬರೆದುಕೊಟ್ಟರು, 'ಮಲೆ ಮಾದೇಶ್ವರ' ಮೌಖಿಕ ಮಹಾಕಾವ್ಯದ ಇಂಗ್ಲಿಷ್ ಅನುವಾದ ಮತ್ತು 'ಎಡ್ವರ್ಡ್ ಸೈದ್' ಕೃತಿಗಳ ವಿಸ್ತೃತ ವಿಮರ್ಶನ ಲೇಖನಗಳನ್ನು ಬರೆದರು. ತುಂಬಾ ಸ್ನೇಹಶೀಲ, ಸರಳ, ಸಜ್ಜನ ವಿದ್ವಾಂಸ. ಈ ಲೇಖನವು ಅವರಿಗೆ ಸಲ್ಲಬೇಕಾದ ಒಂದು ಬಗೆಯ ಅಕ್ಷರ ನಮನ.

★★★